ಅನುಶಾಸನಪರ್ವ, ಭೀಷ್ಮಪರ್ವ ಮೊದಲಾದ ಪರ್ವಗಳ ಲ್ಲಿರುವ ಶ್ಲೋಕಗಳ ಗೊಂಚಲನ್ನೇ ಸ್ವಾಮೀಜಿ ಉದ್ಧರಿಸುತ್ತಾರೆ. ಅಷ್ಟೇ ಅಲ್ಲದೆ, ತಮ್ಮ ಸಮಕಾಲೀನರಾಗಿದ್ದ ಮಹಾತ್ಮ ಗಾಂಧಿ, ಶ್ರೀಅರವಿಂದರು ಮೊದಲಾದ ಮಹಾತ್ಮರ ವಿಚಾರಗಳನ್ನೂ ಪ್ರಾಂಜಲ ಮನಸ್ಸಿನಿಂದ ವಿಮರ್ಶೆಗೆ ಒಳಪಡಿಸುತ್ತಾರೆ. ಹೀಗೆ ಈ ಗ್ರಂಥವು ವಸ್ತುಶಃ ತರಗತಿಯಲ್ಲಿ ಮಾಡಿಕೊಂಡ ಟಿಪ್ಪಣಿಯಾದರೂ, ಉಜ್ವಲ ವೇದಾಂತ ಗ್ರಂಥಗಳ ನಡುವೆ ಅನುಪಮ ಸ್ಥಾನವನ್ನು ಗಳಿಸಿಕೊಳ್ಳುತ್ತದೆ.

ಪೂಜ್ಯ ಸ್ವಾಮಿ ತ್ಯಾಗೀಶಾನಂದಜಿ ಮಹಾರಾಜರಿಗೆ ಈಶಾವಾಸ್ಯ ಉಪನಿಷತ್ತಿನ ಮೇಲೆ ವಿಶೇಷ ಅಭಿಮಾನ. ಇದಕ್ಕೆ ಕಾರಣ, ಈ ಉಪನಿಷತ್ತು, ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರ ಆಧ್ಯಾತ್ಮಿಕ ಅನುಭವಾಮೃತಸಾರವಾಗಿದೆ ಎನ್ನುವುದು. ಈ ಇಬ್ಬರು ಮಹಾನ್‌ಚೇತನಗಳು ತಮ್ಮ ಜೀವನ ಮತ್ತು ಸಂದೇಶಗಳಲ್ಲಿ ತೋರಿದ ಸಕಲ ಮತಗಳ ನಡುವಣ ಸೌಹಾರ್ದಭಾವ, ವಿವಿಧ ಮತಗಳಲ್ಲಿನ ದೇವರುಗಳ ಕಲ್ಪನೆಗಳು ಒಂದೇ ಪರಮಾರ್ಥ ತತ್ತ್ವದ ವಿವಿಧ ಅಭಿವ್ಯಕ್ತಿಗಳು ಎನ್ನುವ ವಿಶ್ವವಿಶಾಲದೃಷ್ಟಿ ಮತ್ತು ಅದಕ್ಕೆ ಹಿನ್ನೆಲೆಯಾದ ಆಧ್ಯಾತ್ಮಿಕ ಪರಿಪೂರ್ಣತೆಯ ನೆಲೆ – ಇವೆಲ್ಲವೂ ಈ ಉಪನಿಷತ್ತಿನ ಹೃದಯವೂ ಆಗಿದೆ. ಇಲ್ಲಿ ಜ್ಞಾನ ಮತ್ತು ಜೀವನಾನುಭವಗಳ ಸುಂದರ ಸಮರಸತೆಯಿದೆ. ಇವುಗಳು ಇಲ್ಲಿ ಪರಸ್ಪರ ಪೋಷಕಗಳಾಗಿವೆಯೇ ಹೊರತು ವಿರುದ್ಧವಾಗಿಲ್ಲ. "ಪ್ರತಿಯೊಬ್ಬ ಜೀವಿಯೂ ಬ್ರಹ್ಮವಿದ್ಯೆಯನ್ನು ಹೊಂದಲು ಅರ್ಹನಾಗಿದ್ದಾನೆ" ಎನ್ನುವ ಶ್ರೀರಾಮಕೃಷ್ಣರ ಅಭಿಪ್ರಾಯವನ್ನೇ ಈಶಾವಾಸ್ಯ ಉಪನಿಷತ್ತು ಕೂಡ ಸಾರಿ ಸಾರಿ ಹೇಳುತ್ತದೆ.

**'ಈಶಾವಾಸ್ಯಮಿದಂ..'** ಎಂದು ಪ್ರಾರಂಭವಾಗುವ ಮಂತ್ರ ದಿಂದ ಈ ಉಪನಿಷತ್ತು ಆರಂಭವಾಗುತ್ತದೆ. **ಈಶ** + **ಆವಾಸ್ಯಂ, ಈಶ** + **ವಾಸ್ಯಂ, ಈಶ** + **ಅವಾಸ್ಯಂ** – ಈ ರೀತಿ ಹಲವು ವಿಧಾನಗಳಲ್ಲಿ 'ಈಶಾವಾಸ್ಯ' ಪದವನ್ನು ಸ್ವಾಮಿ ತ್ಯಾಗೀಶಾನಂದಜಿಯವರು ಬಿಡಿಸಿ ತೋರಿಸುತ್ತಾರೆ. ಮುಂದುವರೆದು, ವಿಸ್ತಾರವಾಗಿ ಶಾಖೋಪಶಾಖೆಗಳಾಗಿ ಬೆಳೆದುಕೊಂಡಿರುವ ವೇದಾಂತವೃಕ್ಷದ ತಾಯಿಬೇರು ಈ ಪದ ದಲ್ಲಿಯೇ ಅಡಗಿದೆ ಎಂದು ಸೋದಾಹರಣವಾಗಿ ವಿವರಿಸು ತ್ತಾರೆ. ಈ ಬಗೆಯ ವಿವರಣೆ ಬೇರೆಲ್ಲೂ ಕಾಣಸಿಗುವುದಿಲ್ಲ. ಸಂಪೂರ್ಣವಾಗಿ ವಿಶಿಷ್ಟವೂ ವಿಭಿನ್ನವೂ ಆದ ದೃಷ್ಟಿಕೋನ ಸ್ವಾಮಿ ತ್ಯಾಗೀಶಾನಂದಜಿ ಅವರದು. 'ಈಶ' ಎಂದರೆ ಒಡೆಯ. ಯಾವುದರ ಒಡೆಯ? ಈ ಪ್ರಪಂಚದ ಒಡೆಯ. ಅನೇಕ ಲೋಕಗಳನ್ನು ಒಳಗೊಂಡಿರುವ ಇಡೀ ವಿಶ್ವದ ಒಡೆಯ; ಅನೇಕ ಸೌರಮಂಡಲಗಳನ್ನು ಒಳಗೊಂಡಿರುವ ಬೃಹತ್ ಬ್ರಹ್ಮಾಂಡಕ್ಕೇ ಒಡೆಯ; ವ್ಯಕ್ತಿಯಾಗಿರುವ ತನಗೂ ಒಡೆಯ, ವ್ಯಕ್ತಿಯೊಬ್ಬನಲ್ಲಿ ಕಾಣಬರುವ ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳಿಗೂ ಒಡೆಯ, ಅಂತರಂಗಕ್ಕೂ ಒಡೆಯ. ಇದಲ್ಲದೆ, ತನ್ನ ಅಂತರಂಗದಲ್ಲಿರುವ ವಿಭುವನ್ನು ಅರಿತುಕೊಂಡು ತಾನೇ ಸ್ವಯಂ ವಿಭುವಾದವನು 'ಈಶ'. ಹೀಗೆ 'ಈಶ' ಶಬ್ದವನ್ನು ಸ್ವಾಮೀಜಿಯವರು ಅತ್ಯಂತ ವಿಸ್ತಾರವಾಗಿ ವ್ಯಾಪಕವಾಗಿ ಅರ್ಥೈಸುತ್ತಾರೆ. **'ವಾಸ್ಯಂ'** ಎಂಬ ಪದಕ್ಕೆ ಮೂಲ 'ವಸ್'. ಇದಕ್ಕೆ ಮುಚ್ಚು, ಆವರಿಸು, ವ್ಯಾಪಿಸು, ಸುಗಂಧ, ಪ್ರೀತಿ, ವಾಸಿಸಲು ಯೋಗ್ಯ, ನಾಶಮಾಡುವುದು ಎಂಬ ಅನೇಕ ಅರ್ಥಗಳಿವೆ. ಈ ಎಲ್ಲ ಅರ್ಥಗಳೂ 'ಈಶ' ಶಬ್ದದೊಡನೆ ಮಿಳಿತಗೊಂಡು, ಭಗವಂತನೇ ಎಲ್ಲದರ ಒಳಹೊರಗೂ, ಮೇಲೆ ಕೆಳಗೆ ಎಲ್ಲೆಲ್ಲೂ ತುಂಬಿದ್ದಾನೆ ಎನ್ನುವುದನ್ನು ಅವರು ಸಮರ್ಥವಾಗಿ ಪ್ರತಿಪಾದಿಸುತ್ತಾರೆ. ಮಾಯಾರೂಪವಾದ ಆವರಣವು ಈ ಸೃಷ್ಟಿಯನ್ನು ಸುತ್ತುಕಟ್ಟಿ ಅದನ್ನು ಮಸುಕುಮಾಡಿದೆ. ಅದನ್ನು ಹಾಗೆ ಮಾಡಿದವನೂ ಭಗವಂತನೇ. ಈ ಮುಸುಕು ಕೂಡ ಭಗವಂತನೇ, ಭಗವಂತನದೇ ಎಂದು ನಾವು ಅರಿಯಬೇಕು. ಆ ಮೂಲಕ ಸರ್ವವನ್ನೂ ಪ್ರೀತಿಸಲು ಕಲಿಯುವುದೇ ನಮ್ಮ ಗುರಿಯಾಗಬೇಕು. ಪ್ರಾಪಂಚಿಕ ಸುಖಭೋಗ, ಅದಕ್ಕೆ ಅಂಟಿಕೊಂಡಿರುವ ಮೋಹ – ಇವೆಲ್ಲ ವನ್ನೂ ನಾಶಮಾಡಿಕೊಳ್ಳಬೇಕು. ಇದೇ **'ಈಶಾವಾಸ್ಯಂ'** ಪದದ ತಾತ್ಪರ್ಯ ಎಂದು ಸ್ವಾಮೀಜಿಯವರು ಸುದೀರ್ಘವಾಗಿ ವಿವರಿಸು ತ್ತಾರೆ. ಎಲ್ಲ ವೇದಾಂತಗಳೂ ಇಷ್ಟನ್ನಲ್ಲದೆ ಮತ್ತೇನನ್ನು ತಾನೇ ಸಾರುತ್ತಿವೆ?

ಹೀಗೆ 'ಈಶಾವಾಸ್ಯಂ' ಎಂಬ ಒಂದೇ ಪದದ ಮೂಲಕ ವೇದಾಂತದ ರಹಸ್ಯವನ್ನೆಲ್ಲ ಸ್ವಾಮೀಜಿಯವರು ಬಿಡಿಸಿ ತೋರಿಸು ತ್ತಾರೆ. ಅರ್ಥಪುಷ್ಟಿಗೆ ಅನೇಕ ಉದ್ಗ್ರಂಥಗಳ ವಾಕ್ಯಗಳನ್ನು ಉದ್ಧರಿಸುತ್ತಾರೆ. ಈಶಾವಾಸ್ಯವೆಂಬ ಗುರಿಯನ್ನು ಸಾಧಿಸಲು ತ್ಯಾಗ, ಯೋಗಗಳೆಂಬ ಆದರ್ಶಗಳನ್ನು ಈ ಉಪನಿಷತ್ತು ನಮ್ಮ ಮುಂದೆ ಇಟ್ಟಿದೆ. ಅವುಗಳನ್ನು ವರ್ಣಾಶ್ರಮಗಳಿಗೆ ಅನುಗುಣವಾಗಿ ಪಾಲಿಸಬೇಕು. ಸ್ವಾಮೀಜಿಯವರು ಇಲ್ಲಿ ವರ್ಣಾಶ್ರಮ ತತ್ತ್ವದ ತಿರುಳನ್ನೇ ನಮ್ಮ ಮುಂದಿಡುತ್ತಾರೆ; ಆ ಮೂಲಕ ಋಷಿಹೃದಯ ವನ್ನು ನಮಗೆ ಪರಿಚಯ ಮಾಡಿಕೊಡುತ್ತಾರೆ. ಮೂಲತಃ ಪ್ರತಿಯೊಂದೂ ಬ್ರಹ್ಮವೇ; ಆ ಬ್ರಹ್ಮವಸ್ತುವೇ 'ಬ್ರಾಹ್ಮಣ' ಎಂದು ಕರೆಯಿಸಿಕೊಂಡು, ಬಗೆಬಗೆಯ ವರ್ಣಗಳಲ್ಲಿ ಕಾಣಿಸಿಕೊಳ್ಳುತ್ತದೆ. ಹೀಗಾಗಿ ಎಲ್ಲ ವರ್ಣದವರೂ ಬ್ರಾಹ್ಮಣರೇ ಸರಿ; ಬ್ರಾಹ್ಮಣತ್ವಕ್ಕೇ ಎಲ್ಲರೂ ಏರಬೇಕು. ಈ ಗಮನೀಯವಾದ ಅಂಶವನ್ನು ಸ್ವಾಮೀಜಿ ನಮ್ಮ ಗಮನಕ್ಕೆ ತರುತ್ತಾರೆ. ಇಂಥ ಅವಿಸ್ಮರಣೀಯವೂ, ರಮಣೀಯವೂ ಆದ ತಾತ್ತ್ವಿಕ ರಹಸ್ಯಗಳ ಮರ್ಮವನ್ನು ತಿಳಿಹೇಳುವ ಅಗಾಧ ಚಿಂತನೆಗಳ ಗಣಿ ಈ ಪುಸ್ತಕ.

ಹೀಗೆ ಹಲವಾರು ಕಾರಣಗಳಿಂದ ಅತ್ಯಂತ ವಿಶಿಷ್ಟವೂ, ಸಂಗ್ರಹಯೋಗ್ಯವೂ ಆದ ಗ್ರಂಥ ಇದು. ಈಶಾವಾಸ್ಯ ಉಪನಿಷತ್ತಿನ ಆಧ್ಯಾತ್ಮಿಕಸಾರವನ್ನು ಆಮೂಲಾಗ್ರವಾಗಿ ಪರಿಚಯಿಸುವ ಈ ಕೃತಿಯನ್ನು ನಾವೆಲ್ಲರೂ ಅಧ್ಯಯನ ಮಾಡಿ ಧನ್ಯರಾಗೋಣ.

**– ಡಾ. ಕೆ. ಎಲ್. ಪ್ರಸನ್ನಾಕ್ಷಿ, ಮೈಸೂರು**